**22 ನೇ ಲಘು ವ್ಯವಹಾರಗಳ ನ್ಯಾಯಾಲಯ ಮತ್ತು ಎಸಿಜೆಎಂ ನ್ಯಾಯಾಲಯ, ಬೆಂಗಳೂರು**

**ಸಿ.ಸಿ. 5955 /2024**

**ಸಾಕ್ಷಿಯನ್ನು ದಿನಾಂಕಃ 06-01-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

ಹೆಸರು : ಲತಾ

ಗಂಡನ ಹೆಸರು : ಚಿನ್ನಪ್ಪ

ವಯಸ್ಸು : 48 ವರ್ಷ

ಉದ್ಯೋಗ : ಗೃಹಿಣಿ

ವಿಳಾಸ : ನಾಗಪ್ಪ ಲೇಔಟ್, ಕಗ್ಗದಾಸಪುರ, ಸಿ ವಿ ರಾಮನ್ ನಗರ, ಬೆಂಗಳೂರು

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದ:**

ನಾನು ಮೇಲೆ ತಿಳಿಸಿರುವ ವಿಳಾಸದಲ್ಲಿ ವಾಸವಿದ್ದೇನೆ. ನಾನು ಮತ್ತು ನನ್ನ ಮಗ ಪಿರ್ಯಾದುದಾರರು ನಡೆಸುವ ಚೀಟಿ ಸದಸ್ಯರಾಗಿದ್ದೆವು. ಪಿರ್ಯಾದುದಾರರು ಕಂಪನಿ ಎನ್ನುವ ಭರವಸೆ ಮೇರೆಗೆ ಮೂರು ಖಾಲಿ ಚಕ್ಕುಗಳು ನೀಡಿದ್ದೆವು. ಚೀಟಿ ಸಂಬಂಧವಾಗಿ ಆರು ಕಂತುಗಳನ್ನು ಅಂದರೆ ರೂ.75,000/- ಗಳನ್ನು 2023 ನೇ ಸಾಲಿನಲ್ಲಿ ಕಟ್ಟಿದ್ದೇನೆ. ನನ್ನ ಚೀಟಿ ಮತ್ತು ನನ್ನ ಮಗನ ಚೀಟಿ ವ್ಯವಹಾರ ಪ್ರತ್ಯೇಕವಾಗಿತ್ತು. ಪಿರ್ಯಾದುದಾರರ ನಿಯಮ ಮತ್ತು ನಿಬಂಧನೆಗಳಿಗೆ ಅನುಸಾರ ಔಪಚಾರಿಕವಾಗಿ ಚೆಕ್ಕುಗಳನ್ನು ಪಡೆದುಕೊಂಡರು. ನಂತರ ನನ್ನ ಚೀಟಿ ರದ್ದಾಗಿದೆ ಎಂದು ಹೇಳಿದರು. ನನ್ನ ಚೀಟಿಯನ್ನು ರವಿ ಎನ್ನುವ ಏಜೆಂಟ್ ಮುಖಾಂತರ ಹಾಕಿದ್ದೆ. ಚೀಟಿ ವಸೂಲಿ ಮಾಡುವವರು ಸರಿಯಾಗಿ ಪ್ರತಿಕ್ರಿಯಿಸಲಿಲ್ಲ. ಚೀಟಿ ರದ್ದಾಗಿರುವ ಬಗ್ಗೆ ನೋಟೀಸ್ ಯಾವುದು ನೀಡಿರಲಿಲ್ಲ. ನಾನು ವಿಚಾರಿಸಲು ಹೋದಾಗ ಸಿಬ್ಬಂದಿ ಇಲ್ಲ ಎಂದು ಹೇಳಿ ಅಲೆದಾಡಿ ಸತಾಯಿಸಿದರು. ನಾನು ಕಟ್ಟಿರುವ ರೂ.75,000/-ಗಳನ್ನು ಹಿಂದಿರುಗಿಸಿರುದಿಲ್ಲ. ಈ ಪಿರ್ಯಾದು

ಸಲ್ಲಿಸಿದ ಬಳಿಕ ನ್ಯಾಯಾಲಯದಿಂದ ಸಮನ್ಸ ಬಂದಿದ್ದು ನಾನು ವಕೀಲರನ್ನು ನೇಮಿಸಿಕೊಂಡು ಕೇಸ್ ನಡೆಸುತ್ತಿದ್ದೇನೆ. ನನ್ನನ್ನು ವಿನಾ ಕಾರಣ ಅಲೆದಾಡಿಸುತ್ತಿದ್ದಾರೆ. ನನಗೂ ಈ ಪ್ರಕರಣದಲ್ಲಿನ ಚೀಟಿ ವ್ಯವಹಾರಕ್ಕೂ ಸಂಬಂಧವಿಲ್ಲ. ನನ್ನ ವಿರುದ್ಧ ಸಲ್ಲಿಸಲಾಗಿರುವ ಪಿರ್ಯಾದನ್ನು ವಜಾ ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ:</u>**

ಈ ಚೀಟಿಯಲ್ಲಿನ ಚಂದಾದಾರ ಪ್ರವೀಣ್ ಸಿ ನನ್ನ ಮಗ. ನನ್ನ ಮಗನ ಚೀಟಿಗೆ ನಾನು ಜಾಮೀನುದಾರಳಾಗಿದ್ದೆ ಎಂದರೆ ಸರಿಯಲ್ಲ. ಅವರು ಚೀಟಿ ಹಾಕಿಸಿಕೊಳ್ಳುವಾಗಿ ಕೆಲವು ದಾಖಲೆಗಳಿಗೆ ಸಹಿ ಪಡೆದರು. ಪಿರ್ಯಾದುದಾರರು ಕಂಪನಿ ಎನ್ನುವ ಭರವಸೆ ಮೇರೆಗೆ ಸಹಿ ಮಾಡಿದ್ದೇನೆ. ನನ್ನ ಮಗ ರೂ.5,00,000/- ಚೀಟಿ ಹಣ ಪಡೆದಿರುವ ಬಗ್ಗೆ ಪಿರ್ಯಾದುದಾರರ ಕಡೆಯಿಂದ ಬಂದನೋಟೀಸ್ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮಗನ ಚೀಟಿ ಸಂಬಂಧ ಕೇಸ್ ಹಾಕಿರುವ ವಿಚಾರ ಈ ಕೋರ್ಟ್ ನಿಂದ ಸಮನ್ಸ್ ಬಂದಾಗ ಗೊತ್ತಾಯಿತು. ಆ ನಂತರ ಪಿರ್ಯಾದಿ ಕಂಪನಿಗೆ ಹೋಗಿ ವಿಚಾರಿಸಿದಾಗ ಅವರು ಸರಿಯಾಗಿ ಪ್ರತಿಕ್ರಿಯಿಸಲಿಲ್ಲ. ಈಗ ತೋರಿಸಿದ ನಿ.ಪಿ.3 ಚೆಕ್ ನಡಿ ಕಂಡು ಬರುವ ಸಹಿ ನನ್ನದು. ಆದರೆ ಆ ಚೆಕ್ಕನ್ನು ತುಂಬಿರಲಿಲ್ಲ. ನಿ.ಪಿ.10 ರಲ್ಲಿ ಕಂಡುಬರುವ ಸಹಿ ನನ್ನದು. ಅದನ್ನು ಪಿರ್ಯಾದುದಾರರ ಕಂಪನಿಯವರು ನಂಬಿಸಿದ ಮೇರೆಗೆ ಹಾಕಿದ್ದೇನೆ.

**<u>ಮರು ವಿಚಾರಣೆಃ</u>** ಇಲ್ಲ.
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)
(ಓ.ಹೇ. ಕೇ.ಸ.ಇ.)

20 ನೇ ಎಎಸ್‌ಸಿಜೆ ಮತ್ತು ಎಸಿಜೆಎಂ
ಬೆಂಗಳೂರು.